ಮತ್ತೊಂದು ದಿಕ್ಕಿಗೆ ಹೊರಳಿ ನನ್ನಿಂದ ದೂರ ದೂರ ಸರಿಯತೊಡಗಿತು. ಅದರ ಕೆಳಗೆ ಅದೇ ಆಕಾಶನೀಲಿ ವೀಣೆ, ಮತ್ತೂ ಕೆಳಗೆ ಆಕಾಶನೀಲಿ ಪಾತರಗಿತ್ತಿ ಎಡಕ್ಕೂ ಬಲಕ್ಕೂ ಲಯಬದ್ಧವಾಗಿ ಜಿಗಿದಾಡುತ್ತಿತ್ತು. ವೀಣೆ ಮಿಡಿಯಲು ಕೈಬೆರಳುಗಳು ಸೋಕ ಬೇಕೆಂದೇನೂ ಇಲ್ಲ, ಅದು ಜಡೆಗೇರಿದರೂ ಮಿಡಿಯಬಲ್ಲದು. ಆ ಮಿಡಿತ ಹೊಮ್ಮಿಸುವ ರಾಗವೇ ಬೇರೆ. ಆ ಮಾಯಾರಾಗಕ್ಕೆ ಜತೆಯಾಗಿ ಪಾತರಗಿತ್ತಿಯ ಮಾಂತ್ರಿಕ ನರ್ತನ...

ಏಕಾಏಕಿ ಹಸಿವೆಯೆನಿಸತೊಡಗಿತು.

ಆ ಹಸಿವು ಹೊಟ್ಟೆಯದ್ದೇ, ಮನಸ್ಸಿನದ್ದೇ ಎಂಬ ಗೊಂದಲದ ಗಾಳಿ ನನ್ನನ್ನು ಅರೆಕ್ಷಣ ದಿಕ್ಕುದಿಕ್ಕಿಗೆ ಹಿಗ್ಗಾಮುಗ್ಗಾ ಓಲಾಡಿಸಿತು. ನಿಸ್ಸಹಾಯಕನಾಗಿ ತಲೆ ಒದರಿದವನನ್ನು ಸಮಾಧಾನಿಸಿ ದಿಕ್ಕು ತೋರುವಂತೆ ತೆಳುನೀಳ ಅಕ್ಷರಗಳ ಫಲಕ ದೃಷ್ಟಿಗೆ ನಿಲುಕಿತು 'ಸುಜಾತಾ ರೆಸ್ಟೋರೆಂಟ್'. ಮತ್ತೆ ವಾಕಿಂಗ್ ಟ್ರ್ಯಾಕ್ ಸೇರಿದೆ. ದಿಕ್ಕು ತಪ್ಪದಂತೆ ಸುಜಾತಾ ರೆಸ್ಟೋರೆಂಟ್ ಫಲಕದ ಮೇಲೇ ಕಣ್ಣು ನೆಟ್ಟು ಎಡಬಲ ನೋಡದೇ ವೇಗವಾಗಿ ಹೆಜ್ಜೆ ಹಾಕಿದೆ.

ಒಂದೊಂದು ದುಂಡನೆಯ ಮೇಲ್ಛಾವಣಿಯ ಕೆಳಗೂ ಒಂದೊಂದು ದುಂಡನೆಯ ಗಾಜಿನ ಹೊದಿಕೆಯ ಬೆತ್ತದ ಮೇಜಿನ ಸುತ್ತಲೂ ಕುರ್ಚಿಗಳು, ಅಮ್ಮಂದಿರನ್ನು ಸುತ್ತುವರಿದು ಕೂತ ಮಕ್ಕಳಂತೆ. ಅಮ್ಮನಂತೆ ಅವೂ ಬೆತ್ತದವು, ಎಲ್ಲ ಅಮ್ಮಂದಿರೂ ಲೆಕ್ಕ ಹಾಕಿಕೊಂಡು ಹಡೆದಂತೆ ನಾಲ್ಕು ನಾಲ್ಕು ಮಕ್ಕಳು. ಹತ್ತಿರ ಕಂಡ ಮೇಜುಗಳೆಲ್ಲದರ ಮೇಲೆ ಮಳೆಹನಿಗಳ ಜಿಗಿದಾಟ ನಡೆದಿತ್ತು. ಹನಿಯೊಂದು ಮೇಲಿಂದ ಹಾರುತ್ತಾ ಬಂದು ಗಾಜಿನ ಮೇಲಿಳಿಯುತ್ತಿದ್ದಂತೇ ಗಾಜಿನೊಳಗಿನಿಂದಲೂ ಹನಿಯೊಂದು ಮೇಲೇರಿ ಬರುತ್ತಿತ್ತು. 'ಟಪ್' ಸದ್ದಿನೊಡನೆ ಎರಡೂ ಕೂಡಿಕೊಂಡು ಒಂದಾಗಿ ಗಾಜು ಹಾಸಿನ ಮೇಲೆ ಬಿಡಿಸುತ್ತಿದ್ದ ಚಿತ್ತಾರದ ಆಟ ಚಂದವೋ ಚಂದ ಅನಿಸಿತು.

ಮಂತ್ರಮುಗ್ಧನಾಗಿ ನೋಡುತ್ತಾ ನಿಂತುಬಿಟ್ಟೆ.

'ಇತ್ತ ಬನ್ನಿ' ಬೇರರ್ ಕರೆ ಎಚ್ಚರಿಸಿತು. ಮಳೆಯೇನೋ ನನಗಿಷ್ಟ. ಆದರೆ ಬಿಸಿಬಿಸಿ ತಿಂಡಿ ಕಾಫಿಗಳಿಗೆ ಅವು ವರ್ಜ್ಯ ಎನ್ನುವುದು ದಿನಪೂರ್ತಿ, ವರ್ಷಪೂರ್ತಿ ಅವುಗಳೊಡನೆ ಒಡನಾಡುವ ಅವನಿಗೆ ಗೊತ್ತು. ಅವನು ತೋರಿದತ್ತ ನಡೆದೆ. ಕುರ್ಚಿಗಳನ್ನು ಕಾಫಿ ಲೋಟಕ್ಕೆ ಮಳೆ ಪ್ರೋಕ್ಷಣೆಯಾಗದಷ್ಟು ದೂರದ ಆ ಅಂಚಿಗೆಳೆದುಕೊಂಡು ಕೂತ ಜೋಡಿಗಳನ್ನು ದಾಟಿ ಕಿಚನ್‌ನತ್ತ ಸಾಗಿದೆ.

ಗೃಹಸ್ಥ ಗೃಹಿಣಿಯರಾರೂ ಜತೆಯಾಗಿ ಹೊರಗೆ ಕಾಲಿಡುವ ಗಳಿಗೆಯಲ್ಲ ಇದು. 'ತೇಜಾಬ್' ಚಿತ್ರದ ಹಾಡನ್ನು ಬದಲಿಸಿ 'ಬಾರಿಸ್ ಆಯಿ ತೋ ಹಮ್ ಜೈಸೇ ಆವಾರೇಂ ಫಿರ್ ನಿಕಲೇ, ರಾಹೋಂ ಮೆ ಔರ್ ಖೋಗಂಯೇ..' ಎಂದು ಮನಸ್ಸಿನಲ್ಲೇ ಗುನುಗಿಕೊಂಡೆ. 'ರಿಮ್ಜೈಮ್



ಗಿರೆ ಸಾವನ್, ಸುಲಗ್ ಸುಲಗ್ ಜಾಯೇ ಮನ್...' ಸಣ್ಣನೆಯ ಗುನುಗೂ ಎಲ್ಲಿಂದಲೋ ಬಂದು ಜತೆ ಸೇರಿತು. ಮರುಕ್ಷಣ ಹಲವಾರು 'ಕಿಸಕ್'ಗಳು ಎಡಬಲ ಹಿಂದು ಮುಂದಿನಿಂದ ಬಂದವು.

ನಾನು ದನಿಯೆತ್ತಿಯೇ ಹಾಡಿದ್ದೆ!

ಪೆಚ್ಚಾಗಿ ಗಕ್ಕನೆ ಬಾಯಿ ಮುಚ್ಚಿಕೊಂಡೆ. 'ರಿಮ್ಜೈಮ್' ಸಹಾ ಗಕ್ಕನೆ ನಿಂತುಹೋಗಿತ್ತು. ಪಕ್ಕದ ಇಬ್ಬರ ನಗೆನೋಟ ನನ್ನತ್ತ ಇದ್ದರೆ ಮತ್ತೊಬ್ಬಾಕೆಯದು ಇನ್ನೊಂದು ದಿಕ್ಕಿಗಿತ್ತು. ಬೇರರ್ ನನಗೆ ತೋರಿದ್ದು ಅದೇ ದಿಕ್ಕು. ಸಂಕೋಚದಲ್ಲಿ ತಲೆ ಮೇಲೆತ್ತದೆ ಅತ್ತ ಸರಸರ ಹೆಜ್ಜೆ ಹಾಕಿದೆ.

ಪ್ಯಾಂಟ್ ಜೇಬಿನಲ್ಲಿ ಫೋನ್ ಗುಂಯ್ಗುಟ್ಟಿತು. ಕೈ ತೂರಿಸಿ ಹೊರಗೆಳೆದುಕೊಂಡೆ. ಅಕ್ಕನ ಕಾಲ್.

ನಡಿಗೆ ನಿಧಾನಗೊಳಿಸಿ 'ಹಲೋ' ಅಂದೆ. ಈಗಷ್ಟೇ ಸಂಕೋಚದ ಹೊಂಡದಲ್ಲಿ ಮುಳುಗೆದ್ದಿದ್ದ ಚಳಿಯನ್ನು ದೂರ ಮಾಡಲೆಂಬಂತೆ ನನ್ನ ದನಿ ಅಯಾಚಿತವಾಗಿ ದೊಡ್ಡದಾಗೇ ಇತ್ತು.

'ಡೆಲ್ಲೀಲಿ ಜೋರು ಮಳೆ ಅಂತೆ, ಟೀವಿಲಿ ನೋಡ್ದೆ' ಅಂದಳು ಅಕ್ಕ. 'ಹ್ಞೂಂ, ರಾತ್ರಿಯಿಂದಾನೂ' ಅಂದೆ. 'ನೀನೆಲ್ಲಿದೀಯ? ಬೈಕ್ ಎತ್ಕೊಂಡ್ ಹೊರಟ್ಬಿಟ್ಟಿದೀಯ?' ಅಂದಳು. ನನ್ನ ಮಳೆ ಹುಚ್ಚು ಅವಳಿಗಲ್ಲದೇ ಇನ್ನಾರಿಗೆ ಗೊತ್ತು! ಸುಮ್ಮನೆ ನಕ್ಕೆ. 'ಒಬ್ನೇನಾ ಅಥ್ವಾ ಜತೇಲಿ ಬೇರೆ ಯಾರಾದ್ರೂ?' ಪ್ರಶ್ನೆ ಬಂತು.

'ಒಬ್ನೇನೇ' ನಕ್ಕೆ. ಏನನ್ನೋ ಹೇಳಹೊರಟ ಅಕ್ಕನ ಮಾತನ್ನು ತಡೆದು ಮುಂದುವರೆಸಿದೆ: 'ಜತೇಲಿ ಇನ್ಯಾರಿರ್ತಾರೆ? ನನಗೊಂದು ಮದುವೆ ಅಂತೇನಾದ್ರೂ ಮಾಡಿದೀಯ ನೀನು?'

ಈಗ ಅಕ್ಕನೂ ನಕ್ಕಳು. 'ನಾನೇ ಹುಡುಕ್ಕೋತೀನಿ, ನಿಂಗೆ ಗೊತ್ತಾಗಲ್ಲ ಅಂತ ಎಷ್ಟ್ ಸಲ ಡೈಲಾಗ್ ಹೊಡೆದಿದೀಯ? ಈಗ ನನ್ನ ಮೇಲೇ ಆಪಾದನೆ! ಮಾಡ್ತೀನಿ ಇರು ನಿಂಗೆ'

ಕಾಲಿಗೇನೋ ತಾಗಿ ಅದು ನೆಲಕ್ಕೆ ಬಿದ್ದಂತಾಯಿತು. 'ಆಮೇಲೆ ಕಾಲ್ ಮಾಡ್ತೀನಿ' ಅಂತ ಅಕ್ಕನಿಗೆ ಹೇಳಿ ಬಿದ್ದದ್ದೇನೆಂದು ಬಾಗಹೋದರೆ ಗೋಧಿ ಬಣ್ಣದ ನೀಳ ಕೈಯೊಂದು ನನಗೂ ಮೊದಲೇ ನೆಲ ಸೇರಿ, ಬಿದ್ದಿದ್ದನ್ನು ಮೇಲೆತ್ತುತ್ತಿತ್ತು. ನಾನು ನೋಡಿಯೇ ನೋಡಿದೆ.

ಮಡಿಸಿದ್ದ ಆಕಾಶನೀಲಿ ಛತ್ರಿ! ಅದರೊಂದಿಗೇ ಮೇಲೇರಿದ ನನ್ನ ನೋಟಕ್ಕೆ ನೇರವಾಗಿ ಸಿಕ್ಕಿದ್ದು ಆಕಾಶನೀಲಿ ದುಪಟ್ಟಾ ಸುತ್ತಿದ್ದ ಗೋಧಿಬಣ್ಣದ ದುಂಡು ಮುಖ. ಅಲ್ಲಿ, ಕಣ್ಣುಗಳಲ್ಲಿ ಇಡಿಯಾಗಿ ತುಂಬಿಕೊಂಡದ್ದು ಪುಟಾಣಿ ಆಕಾಶನೀಲೀ ಲವ್ ಇಮೋಜಿ ಬಿಂದಿ.

ಸಾರಿ ಹೇಳುವುದು ನನಗೆ ಮರೆತೇಹೋಯಿತು. ಮನದಗಲಕ್ಕೂ ಆಕಾಶನೀಲಿ ವೀಣೆಯ ರಾಗ, ಅದಕ್ಕನುಗುಣವಾಗಿ ಆಕಾಶನೀಲಿ ಪಾತರಗಿತ್ತಿಯ ನರ್ತನ...

'ಅಲ್ಲೇ ಕೂರಿ. ಬೇರೆಲ್ಲೂ ಒಣ ಜಾಗ ಇಲ್ಲ' ಬೇರರ್‌ನ ಬೇರೆ ದನಿ.

ಆಜ್ಞೆಯನ್ನು ವಿಧೇಯನಾಗಿ ಪಾಲಿಸಿದೆ. ಬೇರರ್ ನನ್ನ ಪಾಲಿಗೀಗ ಟಾರ್ಚ್‌ಬೇರರ್!

ಪಕ್ಕದ್ದಾರದೋ ಮೊಬೈಲ್ 'ಆಪ್ ಯ್ಞೂಂಹೀ ಅಗರ್ ಹಮ್ ಸೆ ಮಿಲ್ತೇ ರಹೇಂ, ದೇಖಿಯೇ ಏಕ್ ದಿನ್ ಪ್ಯಾರ್ ಹೋಜಾಯೇಗಾ' ಎಂದುಲಿಯಿತು. ತಲೆಯೆತ್ತಿ ಎದುರಿನ ಮುಖದತ್ತ ನೋಡಿದರೆ ಅದರ ತುಂಬಾ ನನ್ನಿಷ್ಟದ ಹನಿ ಮಳೆಯಂಥದ್ದೇ ನಗೆ. ಮಾತಾಡಲೋ ಬೇಡವೋ ಎನ್ನುವಂತೆ ತುಟಿಗಳು ಮೆಲ್ಲಗೆ ಬಿರಿದವು. 'ನೀವೂ ಸಹಾ...' ಮುಂದೆ ಹೇಳಲಾಗದೇ ಅವಳು ನಾಚಿ ತಲೆ ಬಾಗಿಸಿದಳು.

ಹತ್ತಿರ ಬಂದು ನಮ್ಮಿಬ್ಬರತ್ತಲೂ ಒಮ್ಮೊಮ್ಮೆ ನೋಟ ಹೊರಳಾಡಿಸಿದ ಬೇರರ್‌ಗೆ ಸ್ವೀಟ್ ಏನಿದೆಯೆಂದು ಕೇಳಿದೆ. 'ಗುಲಾಬ್ ಜಾಮೂನ್, ಬಿಸಿ ಬಿಸಿ' ಅಂದ.

'ಓಕೇ...' ಸಣ್ಣಗೆ ಆರಂಭಿಸಿದವನು ಗಕ್ಕನೆ ನಿಲ್ಲಿಸಿದೆ. ನನ್ನ ದನಿಯಲ್ಲೀಗ ಸಂಕೋಚಕ್ಕೆಡೆಯಿರಕೂಡದು. ಅನುನಯ, ಅಧಿಕಾರವೆರಡೂ ಸಮನಾಗಿ ಮೇಳೈಸಿರಬೇಕು. ಹುಡುಗ ಮತ್ತು ಗಂಡಸಿನ ನಡುವಿನ ಗೆರೆಯನ್ನೀಗ ನಾನು ದಾಟಿ ಬಿಡಬೇಕು.

ವಿಂಡ್ಚೀಟರ್‌ನ ಹುಡ್ ಅನ್ನು ಸರ್ರನೆ ತಲೆಯಿಂದೆತ್ತಿ ಹಿಂದಕ್ಕೊಗೆದೆ. ಎದೆ ಸೆಟೆಸಿ, ಭುಜಗಳನ್ನು ವಿಶಾಲಗೊಳಿಸಿ ಕುಳಿತೆ. ಒಮ್ಮೆ ಕೆಮ್ಮಿ ಗಂಟಲು ಸರಿಪಡಿಸಿಕೊಂಡೆ. ಸ್ಪಷ್ಟ, ಗಟ್ಟಿ ದನಿಯಲ್ಲಿ ಹೇಳಿದೆ: 'ಗುಲಾಬ್ ಜಾಮೂನ್, ಎರಡು. ಜತೆಗೆ ಬಿಸಿ ಬಿಸಿ ಡಿಪ್ಡ್ ವಡಾ ಸಾಂಬಾರ್, ಎರಡು ಬೌಲ್. ಸಾಂಬಾರ್ ಕುದೀತಾ ಇರಬೇಕು, ಅದು ಮುಖ್ಯ. ಅದು ಮುಗಿದಾದ ಮೇಲೆ ಕಾಫಿ, ಎರಡು...' ■